# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್–153 – ಜಯನಗರ

## ವಾರ್ಡ್ ಸಮಿತಿಯ ಸದಸ್ಯರ ಸಭೆಯ ನಡವಳಿಗಳು

ದಿನಾಂಕ: **05–01–2019** ರಂದು ಶನಿವಾರ, **ಬೆಳ್ಳಿಗ್ಗೆ 11:00 ಘಂಟೆಗೆ ಜಯನಗರ ವಾರ್ಡ್–153 ರ ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ಪೂಜ್ಯ ಮಹಾಪೌರರು, ಶ್ರೀಮತಿ. ಗಂಗಾಂಬಿಕೆ** ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು. ತದನಂತರ 7 ಜನ ಸದಸ್ಯರುಗಳು ಸಭೆಗೆ ಹಾಜರಾಗಿದ್ದು, ಸಭೆಯಲ್ಲಿ ಚರ್ಚಿಸಿದ ವಿಷಯಗಳು ಹಾಗೂ ನಿರ್ಣಯಗಳಿಗೆ ಸಂಬಂಧಿಸಿದ ಸದಸ್ಯರ ಸಭೆಯ ನಡವಳಿಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರಮ. ಸಂಖ್ಯೆ | ಸಭೆಯಲ್ಲಿ ಚರ್ಚಿಸಿದ ವಿಷಯಗಳು: | ಸಭೆಯ ನಿರ್ಣಯಗಳು: |
|---|---|---|
| 1 | ಡಾ|| ಎಂ.ಎಸ್. ಪ್ರಕಾಶ್ ಸಮಿತಿಯ ಸದಸ್ಯರು ಇವರು ಮಾತನಾಡಿ ಜಯನಗರ 1ನೇ ಬ್ಲಾಕ್ ಮತ್ತು 2ನೇ ಬ್ಲಾಕ್ ಪ್ರದೇಶಗಳಲ್ಲಿ ಸುಮಾರು 60–70 ಮರಗಳು ಉರುಳಿ ಬಿದ್ದಿರುವ ಸ್ಥಳಗಳಲ್ಲಿ ಹೊಸದಾಗಿ ಸಸಿಗಳನ್ನು ನೆಡಲು ಕೋರಿರುತ್ತಾರೆ. | ಕಾರ್ಯದರ್ಶಿ ಮತ್ತು ಸಂಚಾಲಕರು ಈ ಬಗ್ಗೆ ಅತಿ ಜರೂರಾಗಿ ಅರಣ್ಯ ಇಲಾಖೆಯೊಂದಿಗೆ ಚರ್ಚಿಸಿ ಕೂಡಲೇ ಹೊಸದಾಗಿ ಸಸಿಗಳನ್ನು ನೆಡುವ ಬಗ್ಗೆ ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ. |
| 2 | ಡಾ|| ಎಂ.ಎಸ್. ಪ್ರಕಾಶ್ ಸಮಿತಿಯ ಸದಸ್ಯರು ಇವರು ಮಾತನಾಡಿ ಜಯನಗರ 2ನೇ ಬ್ಲಾಕ್ 8ನೇ ಮುಖ್ಯರಸ್ತೆಯಲ್ಲಿ ಅಲ್ಲಲ್ಲಿ ಹಾಳಾಗಿರುವ ಪಾದಚಾರಿ ಮಾರ್ಗವನ್ನು ಸರಿಪಡಿಸಲು ಕೋರಿರುತ್ತಾರೆ. | ಸದರಿ ವಿಷಯದ ಬಗ್ಗೆ ಮುಂದಿನ ವಾರ್ಡ್ ಮಟ್ಟದ ಅಭಿವೃದ್ಧಿ ಕಾಮಗಾರಿಗಳ ಅಡಿಯಲ್ಲಿ ಕ್ರಮ ವಹಿಸಲಾಗುವುದೆಂದು ತಿಳಿಸಿರುತ್ತಾರೆ. |

| | | |
|---|---|---|
| 3 | ಶ್ರೀಮತಿ. ಶಾನ್ ಅಹಮದ್, ಸಮಿತಿಯ ಸದಸ್ಯರು ಮಾತನಾಡಿ ಮಧ್ಯ ವೆಸನಿಗಳಿಂದ (ಡ್ರಗ್ಸ್) ಆಗುತ್ತಿರುವ ತೊಂದರೆಗಳನ್ನು ತಪ್ಪಿಸಲು ಕೋರಿರುತ್ತಾರೆ. | ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಾದ ಶ್ರೀ. ದೊಡ್ಡೇಗೌಡ ಮತ್ತು ಶ್ರೀಮತಿ. ರೇಷ್ಮ ರವರು ಅತಿ ಜರೂರಾಗಿ ಕ್ರಮ ಜರುಗಿಸಲು ವರದಿ ಸಲ್ಲಿಸಲಾಗುವುದು ಎಂದು ತಿಳಿಸಿರುತ್ತಾರೆ. |
| 4 | ಶ್ರೀ. ಸಯ್ಯದ್ ಆಶೀಫ್ ಮಸೂದ್, ಸಮಿತಿಯ ಸದಸ್ಯರು ಮಾತನಾಡಿ ಬಸವನಗುಡಿ ವ್ಯಾಪ್ತಿಯಲ್ಲಿ ಮಧ್ಯ ವೆಸನಿಗಳಿಂದ (ಡ್ರಗ್ಸ್) ಆಗುತ್ತಿರುವ ತೊಂದರೆಗಳನ್ನು ತಪ್ಪಿಸಲು ಹಾಗೂ ಸ್ಟ್ರೀಟ್ ಲೈಟ್ ಬಗ್ಗೆ ಕೋರಿರುತ್ತಾರೆ. | ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಪೋಲೀಸ್ ಸಿಬ್ಬಂದಿಯವರು ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ. ಹಾಗೂ ಬೆಸ್ಕಾಂ ಇಲಾಖೆಯವರು ಸ್ಟ್ರೀಟ್‌ಲೈಟ್‌ಗಳ ಬಗ್ಗೆ ಕ್ರಮ ವಹಿಸುವುದುದಾಗಿ ತಿಳಿಸಿರುತ್ತಾರೆ. |
| 5 | ಶ್ರೀ. ಬಹದ್ದೂರ್, ಗುಲ್ಬರ್ಗಾ ಕಾಲೋನಿ ಕಾರ್ಮಿಕರ ಸಂಘದ ಪದಾಧಿಕಾರಿಗಳು ಮಾತನಾಡಿ ಒಂದು ಬೋರ್‌ವೆಲ್‌ನ ಅವಶ್ಯಕತೆ ಇರುವುದಾಗಿ ಮನವಿ ಮಾಡಿರುತ್ತಾರೆ. ಹಾಗೂ ಬೆಸ್ಕಾಂ ಇಲಾಖೆಯಿಂದ ಕೇಬಲ್ ಅಳವಡಿಕೆಯ ಬಗ್ಗೆ ತೊಂದರೆ ಇರುವುದಾಗಿ ತಿಳಿಸಿರುತ್ತಾರೆ | ಸದರಿ ವಿಷಯದ ಬಗ್ಗೆ ಮುಂದಿನ ವಾರ್ಡ್ ಮಟ್ಟದ ಅಭಿವೃದ್ಧಿ ಕಾಮಗಾರಿಗಳಲ್ಲಿ ಕ್ರಮ ವಹಿಸಲಾಗುವುದೆಂದು ಪಾಲಿಕೆ ಅಧಿಕಾರಿಗಳು ತಿಳಿಸಿರುತ್ತಾರೆ. ಹಾಗೂ ಬೆಸ್ಕಾಂ ಇಲಾಖೆಯವರು ಕೇಬಲ್‌ಗಳ ಬಗ್ಗೆ ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ. |
| **ಸಭೆಯಲ್ಲಿ ಹಾಜರಿದ್ದ ವಾರ್ಡ್–153ರ ವ್ಯಾಪ್ತಿಯಲ್ಲಿನ ನಾಗರೀಕರು ನೀಡಿರುವ ದೂರಿನ ವಿಷಯಗಳು ಮತ್ತು ನಿರ್ಣಯಗಳು** | | |
| 1 | ಶ್ರೀಮತಿ. ಶಿಲ್ಪ, ನಾಗರೀಕರು ವಾರ್ಡ್–153 ರವರು ಮಾತನಾಡಿ ಜಯನಗರ 2ನೇ ಬ್ಲಾಕ್ 9ನೇ ಮುಖ್ಯರಸ್ತೆಯಲ್ಲಿ ಮಲಬಾರ್ ಗೋಲ್ಡ್ ಜ್ಯುವಲರಿ ಶಾಪ್ ಜಂಕ್ಷನ್ ಹತ್ತಿರ ಮತ್ತು ಮಾದವನ್ ಪಾರ್ಕ್ ವೃತ್ತದ ಹತ್ತಿರ ಹೆಚ್ಚಿನ ವಾಹನ ದಟ್ಟಣೆ ಇದ್ದು, ಸಂಚಾರ ನಿರ್ವಾಹಕರ ಅವಶ್ಯಕತೆ ಇರುವುದಾಗಿ ಕೋರಿರುತ್ತಾರೆ. ಮತ್ತು ಮೆಕ್ಯಾನಿಕಲ್ ಸ್ವೀಪಿಂಗ್ ಅಗತ್ಯವಿರುವ ಬಗ್ಗೆ ತಿಳಿಸಿರುತ್ತಾರೆ | ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಪೋಲೀಸ್ ಸಿಬ್ಬಂದಿಯವರು ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ. ಹಾಗೂ ಪಾಲಿಕೆ ಅಧಿಕಾರಿಗಳು ಈ ಬಗ್ಗೆ ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ. |
| 2 | ಶ್ರೀ . ಕುಮಾರ್ ನಾಗರೀಕರು ವಾರ್ಡ್–153 ರವರು ಮಾತನಾಡಿ ಜಯನಗರ 1ನೇ ಬ್ಲಾಕ್, 4ನೇ ಅಡ್ಡರಸ್ತೆ, ಸುತ್ತಮುತ್ತ ಅಪಘಾತಗಳು ಸಂಭವಿಸುತ್ತಿರುವುದರಿಂದ ಹಂಪ್‌ಗಳ ಅವಶ್ಯಕತೆ ಇರುವುದಾಗಿ ತಿಳಿಸಿರುತ್ತಾರೆ. | ಪಾಲಿಕೆ ಅಧಿಕಾರಿಗಳು ಈ ಬಗ್ಗೆ ಪರಿವೀಕ್ಷಣೆ ನಡೆಸಿ ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ. |

| | | |
|---|---|---|
| 3 | ಡಾ॥ ರಘುನಾಥ್ ನಾಗರೀಕರು ವಾರ್ಡ್-153 ರವರು ಮಾತನಾಡಿ ಘನತ್ಯಾಜ್ಯ ವಿಂಗಡಣೆಯ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. | ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸ.ಕಾ.ನಿ.ಅ ಘನತ್ಯಾಜ್ಯ ನಿರ್ವಹಣೆ, ಚಿಕ್ಕಪೇಟೆ ವಿಭಾಗ ಅತಿ ಜರೂರಾಗಿ ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ. |
| 4 | ಶ್ರೀ. ವಿನಯ್‌ಕುಮಾರ್, ನಾಗರೀಕರಲು ವಾರ್ಡ್-153 ರವರು ಮಾತನಾಡಿ 1ನೇ ಬ್ಲಾಕ್ ಜಯನಗರ, 7ನೇ ಅಡ್ಡರಸ್ತೆ, ಸುತ್ತ ಮುತ್ತ ವಾಹನಗಳನ್ನು ಪಾರ್ಕಿಂಗ್ ಮಾಡಿದ್ದು ಇದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ತಿಳಿಸಿರುತ್ತಾರೆ. | ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಪೋಲೀಸ್ ಸಿಬ್ಬಂದಿಯವರು ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ. |

ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳನ್ನು ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು ಸಭೆಯ ನಡವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ನಂತರ ಶ್ರೀ. ಕೆ.ಬಿ. ರಾಮದಾಸಪ್ಪ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಹೊಂಬೇಗೌಡನಗರ ಉಪವಿಭಾಗ ರವರು ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

**ಕಾರ್ಯದರ್ಶಿ ಮತ್ತು ಸಂಚಾಲಕರು**
**ವಾರ್ಡ್-153**

**ಪೂಜ್ಯ ಮಹಾಪೌರರು ಹಾಗೂ ಅಧ್ಯಕ್ಷರು**